ಇ) ಎಷ್ಟು ಡಿಸ್ಟಿಲರಿಗಳ ವಿರುದ್ಧ ಕಾನೂನು ಉಲ್ಲಂಘನೆಯ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ?

ಶ್ರೀ ಎಂ.ಎಂ.ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

ಅ) 75 (ವಿವರಗಳನ್ನು ಅನುಬಂಧ 'ಅ'ದಲ್ಲಿ ತೋರಿಸಿದೆ)

	1998-99	1999-2000
ಅಬಕಾರಿ ವರ್ಷ		(ಫೆಬ್ರುವರಿ ವರೆಗೆ)
	(ಲಕ್ಷ ಲೀಟರ್‌ಗಳಲ್ಲಿ)	
ಭಾರತೀಯ ಮದ್ಯ:	520.81	341.67
ಫೆನ್ನಿ	: 12.19	10.94

(ವಿವರಗಳನ್ನು ಅನುಬಂಧ-'ಬಿ' ಮತ್ತು 'ಸಿ' ಯಲ್ಲಿ 7 ಡಿಸ್ಟಿಲರಿಗಳು (1999-2000ನೇ ವರ್ಷದಲ್ಲಿ ತೋರಿಸಲಾಗಿದೆ)

ರಾಜ್ಯದಲ್ಲಿ ಪಡಿತರ ಚೀಟಿ ವಿತರಣೆ.

146 (443)

ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಡು ಬಡವರನ್ನು ಗುರುತಿಸಿ ಅವರಿಗೆ 20 ಕೆ.ಜಿ. ಪಡಿತರ ಆಹಾರ ಧಾನ್ಯಗಳನ್ನು ಹಂಚಲು ಸರ್ಕಾರ ಯೋಚಿಸಿದೆಯೆ?

ಆ) ಕೇಂದ್ರ ಸರ್ಕಾರದ ಧೋರಣೆಯನ್ವಯ ಸಬ್ಸಿಡಿ ರೂಪದಲ್ಲಿ ಪಡಿತರ ವ್ಯವಸ್ಥೆಯನ್ನು ಜಾರಿಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಪಡಿತರ ಸೀಮೆಎಣ್ಣೆ, ಆಹಾರ ನೀಡುವ ಕಾರ್ಡುದಾರರಿಗೆ ಕಾರ್ಡು ನೀಡಿಕೆಯಲ್ಲಿ ಹೊಸ ನೀತಿಯನ್ನೇನಾದರೂ ಸರ್ಕಾರದ ಯೋಚಿಸಿದೆಯೆ?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) ಕೇಂದ್ರ ವಿತ್ತ ಮಂತ್ರಿಗಳು ಈ ಬಗ್ಗೆ 2000-2001ನೇ ಸಾಲಿನ ಬಜೆಟ್ ಭಾಷಣದಲ್ಲಿ ಪ್ರಕಟಿಸಿರುತ್ತಾರೆ. ಈ ಯೋಜನೆಯನ್ನು 1-4-2000 ದಿಂದ ಜಾರಿಗೆ ತರಲು ಕೇಂದ್ರ ಸರ್ಕಾರವು ಉದ್ದೇಶಿಸಿದೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನಿಯಮಗಳಂತೆ ಯೋಜನೆಯನ್ನು ಜಾರಿಗೆ ತರುತ್ತದೆ.

ಆ) ಈಗಿನ ಕೇಂದ್ರ ಸರ್ಕಾರದ ಧೋರಣೆಯಂತೆ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಪ್ರತಿ ಪಡಿತರ ಚೀಟಿಗೆ 10 ಕೆ.ಜಿ.ಯಂತೆ ಸಹಾಯಕ ಧನ ಮುಕ್ತ ಆಹಾರ ಧಾನ್ಯಗಳನ್ನು ನಿರ್ದಿಷ್ಟ ಗುರಿಯುಳ್ಳ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ದಿನಾಂಕ: 1-6-97ರಿಂದ ನೀಡಲಾಗುತ್ತಿದೆ. ರಾಜ್ಯದಲ್ಲಿ ಹಾಲಿ 64.79 ಲಕ್ಷ ಹಸಿರು ಕಾರ್ಡುಗಳು ಚಾಲ್ತಿಯಲ್ಲಿ ಇದ್ದು ಈ ಎಲ್ಲಾ ಕಾರ್ಡುಗಳಿಗೆ ಸಹಾಯಕಧನಯುಕ್ತ ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ. ಇದರ ಪೈಕಿ 28.75 ಲಕ್ಷ ಹಸಿರು ಕಾರ್ಡುದಾರರಿಗೆ ಮಾತ್ರ ಕೇಂದ್ರ ಸರ್ಕಾರವು ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಸುತ್ತಿದೆ. ಉಳಿದ 36.04 ಲಕ್ಷ ಹಸಿರು ಕಾರ್ಡುದಾರರಿಗೆ ರಾಜ್ಯ ಸರ್ಕಾರವು ಎ.ಪಿ.ಎಲ್. ದರದಲ್ಲಿ ಆಹಾರ ಧಾನ್ಯಗಳನ್ನು ಖರೀದಿಸಿ ಬಿ.ಪಿ.ಎಲ್. ದರದಲ್ಲಿ ಈ ಕಾರ್ಡುದಾರರಿಗೆ ವಿತರಿಸುತ್ತಿದೆ. ಇದಕ್ಕಾಗಿ ರಾಜ್ಯ ಸರ್ಕಾರವು 99-2000 ನೇ ಸಾಲಿಗೆ 305 ಕೋಟಿ ರೂಪಾಯಿಗಳು ಖರ್ಚು ಮಾಡುತ್ತಿದೆ.

ಇ) ಹೌದು. ಸರ್ಕಾರದ ಆದೇಶ ಸಂಖ್ಯೆ: ಎಫ್‌ಸಿಎಸ್: 6: ಡಿಆರ್‌ಎ: 2000, ದಿನಾಂಕ 1-2-2000 ದಲ್ಲಿ ಹೊಸ ಪಡಿತರ ಚೀಟಿಯನ್ನು ಕೋರಿ ಬಂದ ಅರ್ಜಿದಾರರಿಗೆ ಪಡಿತರ ಚೀಟಿಗಳನ್ನು ನೀಡುವ ವಿಧಿ ವಿಧಾನಗಳನ್ನು ಸರಳೀಕೃತಗೊಳಿಸಿ ಪರಿಷ್ಕರಿಸಿ ಸೂಚನೆಗಳನ್ನು ಮತ್ತು ಮಾರ್ಗದರ್ಶನಗಳನ್ನು ನೀಡಿದೆ. ಇದರಂತೆ ವಿವಿಧ ಬಗೆಯ ಕಾರ್ಡುಗಳನ್ನು ಅಂದರೆ ಬಿಳಿಯ ಕಾರ್ಡುಗಳು (ಗೌರವಾನ್ವಿತ) ಕೇಸರಿ ಹಾಗೂ ಹಸಿರು ಪಡಿತರ ಚೀಟಿಗಳನ್ನು ಪಡೆಯಲು ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ, ವಾಸಸ್ಥಳ ಹಾಗೂ ಹಿಂದೆ ವಾಸ ಮಾಡುತ್ತಿದ್ದ ಸ್ಥಳದ ಬಗ್ಗೆ ಕೆಲವು ದಾಖಲೆಗಳನ್ನು ಸಲ್ಲಿಸಿದಲ್ಲಿ, ಇಲಾಖೆಯ ಆಹಾರ ನಿರೀಕ್ಷಕರು ಅರ್ಜಿಯನ್ನು ಸಲ್ಲಿಸಿದ 30 ದಿನಗಳೊಳಗಾಗಿ ಪರಿಶೀಲಿಸಿ ಅರ್ಹರಿಗೆ ಪಡಿತರ ಚೀಟಿ ನೀಡುವ ಬಗ್ಗೆ ಕ್ರಮ ಕೈಗೊಳ್ಳುವರು.